S C.R.P.67

| Form No.4 (Criminal) Deposition Sheets (R.P.No.57) |
|---|

# 5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ

## ಸ್ಪೆಷಲ್ ಕೇಸ್ ನಂಬರ್‌ಃ 208/2019

**ಚಾ.ಸಾ.–04 ಪ್ರಾ.ಸಾ.–05**

| | |
|---|---|
| **ಸಾಕ್ಷಿದಾರರ ಹೆಸರು** | **ಪ್ರಸಾದ್ ಕುಮಾರ್** |
| **ತಂದೆಯ ಹೆಸರು** | **ಗುರುದೇವ ಆರಾಧ್ಯ** |
| **ವಯಸ್ಸು** | **42 ವರ್ಷಗಳು** |
| **ಉದ್ಯೋಗ** | **ಸಿನಿಮಾ ರೈಟರ್** |
| **ವಾಸ** | **ಬೆಂಗಳೂರು** |

**ದಿನಾಂಕಃ 24.02.2026 ರಂದು ಪ್ರಮಾಣವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ**

1) ಚಾಸಾ–1 ರವರ ಪರಿಚಯ ನನಗೆ ಇದೆ. ಅವರು ಯಾವ ಊರಿನವರು ಯಾವ ಜಾತಿಯವರು ಎಂದು ನನಗೆ ಗೊತ್ತಿಲ್ಲ.

2) ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿತರ ಪರಿಚಯ ನನಗೆ ಇದೆ (Witness identified accused Nos. 1 and 2 in the dock). ಅವರು ನನ್ನ ತಂದೆಯ ಜೊತೆ ಕೆಲಸ ಮಾಡುತ್ತಿದ್ದರು. ಅವರು ಯಾವ ಜಾತಿಯವರು ಎಂದು ನನಗೆ ಗೊತ್ತಿಲ್ಲ.

3) ನನ್ನ ತಂದೆ ಶ್ರೀರಂಗಪಟ್ಟಣ ಪೋಲೀಸ್ ಠಾಣೆಯಲ್ಲಿ ಪೋಲೀಸ್ ಪೇದೆಯಾಗಿದ್ದ ಸಮಯ ಮೊಗರಹಳ್ಳಿ ಸರ್ವೆ ನಂ.50 ರಲ್ಲಿ ನನ್ನ ತಂದೆ ಮತ್ತು ಇತರ ಪೋಲೀಸರು ಸೇರಿ ಹಣ ಸಂಗ್ರಹಿಸಿ 1ನೇ ಆರೋಪಿ ರಾಜಮ್ಮರವರ ಹೆಸರಿನಲ್ಲಿ ಒಟ್ಟಾಗಿ ಜಮೀನು ಖರೀದಿ ಮಾಡಿದ್ದರು. ಅದರಲ್ಲಿ ಎರಡು ಕಾಲು ಗುಂಟೆ ಜಮೀನನ್ನು ನನ್ನ ತಾಯಿ ಸುಮಿತ್ರಾರವರ ಹೆಸರಿಗೆ 1ನೇ ಆರೋಪಿಯಿಂದ ಕ್ರಯಕ್ಕೆ ಪಡೆದುಕೊಂಡಿರುತ್ತೇವೆ. ಅದೇ ರೀತಿ ಇನ್ನು ಸುಮಾರು ಪೋಲೀಸರು ಮತ್ತು ನಿವೃತ್ತ ಪೋಲೀಸರು 1ನೇ ಆರೋಪಿಯಿಂದ ಕ್ರಯಕ್ಕೆ ಸದರಿ ಸರ್ವೆ ನಂಬರಿನಲ್ಲಿ ಜಮೀನುಗಳನ್ನು ಪಡೆದುಕೊಂಡಿದ್ದರು. ನಮ್ಮ ತಾಯಿಯ ಹೆಸರಿಗೆ ಮತ್ತು ಉಳಿದ ಖರೀದಿದಾರರ ಹೆಸರಿಗೆ ಖಾತೆಯಾದ ನಂತರ ಅವರವರ

ಸ್ವಾಧೀನದಲ್ಲಿ ಸದರಿ ಜಮೀನು ಇತ್ತು. ಜಮೀನು ಖರೀದಿಸಿದ ಎಲ್ಲರೂ ಸೇರಿ ಒಟ್ಟಾಗಿ ರಸ್ತೆ ಮಾಡುವುದು ಮತ್ತು ಬೋರ್ಡ್ಗ್ ಹಾಕುವ ಕಾಮಗಾರಿ ಮಾಡಿಸಿ ನಾಮಫಲಕವನ್ನು ಅವರವರ ಜಮೀನಿನಲ್ಲಿ ಹಾಕಿಸಿಕೊಂಡೆವು. 2019 ಜನವರಿ ತಿಂಗಳಿನ ಒಂದು ದಿನ ನಿವೃತ್ತ ಎ.ಎಸ್.ಐ ನಾಗರಾಜು ರವರು ನನಗೆ ಫೋನ್ ಮಾಡಿ ಜಮೀನಿನಲ್ಲಿ ಕಲ್ಲೆಲ್ಲಾ ಕೀಳುಸುತ್ತಿದ್ದಾರೆ ಗಲಾಟೆಯಾಗುತ್ತಿದೆ ಹೋಗಿ ನೋಡು ಎಂದು ನನಗೆ ಹೇಳಿದರು. ಆ ಸಮಯ ನಾನು ಮೈಸೂರಿನಲ್ಲಿ ಇದ್ದು ನಾನು ಸ್ಥಳಕ್ಕೆ ಕೂಡಲೇ ಹೋದೆ. ನಾನು ಸ್ಥಳಕ್ಕೆ ಹೋಗುವಷ್ಟರಲ್ಲಿ ನಾವು ನೆಟ್ಟಿಸಿದ್ದ ಕಲ್ಲುಗಳನ್ನೆಲ್ಲಾ ಕಿತ್ತು ಹಾಕಿದ್ದರು. ನಾಮಫಲಕಗಳೆಲ್ಲಾ ಮುರಿದು ಹಾಕಿದ್ದರು. ಅಲ್ಲಿ 1ನೇ ಆರೋಪಿ ಮತ್ತು ಅವರ ಜೊತೆ ಇಬ್ಬರು ಇದ್ದರು. ನಾನು 1ನೇ ಆರೋಪಿಯನ್ನು ಏನು ಗಲಾಟೆ ಎಂದು ಕೇಳಿದಾಗ ಅವರ ಮಕ್ಕಳ ಹೆಸರಿನಲ್ಲಿರುವ ಜಮೀನಿನಲ್ಲಿ ಅವರನ್ನು ಕೇಳದೆ ಕಲ್ಲು ನೆಟ್ಟಿದ್ದಾರೆ ಆದ್ದರಿಂದ ಕಲ್ಲುಗಳನ್ನ ಮತ್ತು ನಾಮಫಲಕಗಳನ್ನು ನಾನು ಕೀಳಿಸಿರುತ್ತೇನೆ ಎಂದು ಹೇಳಿದರು. ನನ್ನ ತಾಯಿಯ ಹೆಸರಿನಲ್ಲಿದ್ದ ಜಮಿನಿನಲ್ಲಿ ನೆಟ್ಟಿದ್ದ ಕಲ್ಲನ್ನು ಕೀಳಿಸಿದ್ದ ಬಗ್ಗೆ ಕೇಳಿದಾಗ ನಿಮಗೆ ಖಾತೆಯಾಗಿದೆಯಲ್ಲಾ ಹೋಗು ಎಂದು ನನಗೆ ಹೇಳಿದರು. ನಾನು ನಾಗರಾಜುರವರಿಗೆ ವಿಷಯವನ್ನು ಫೋನ್ ಮೂಲಕ ತಿಳಿಸಿರುತ್ತೇನೆ. ನಾನು ಸ್ಥಳಕ್ಕೆ ಹೋದಾಗ 1ನೇ ಆರೋಪಿಯ ಮಗಳು ಸಹಾ ಅಲ್ಲಿ ಇದ್ದರು. 2ನೇ ಆರೋಪಿ ಈಗ ತಾನೆ ಸ್ಥಳದಿಂದ ಹೊರಟು ಹೋದರು ಎಂದು 1ನೇ ಆರೋಪಿ ನನಗೆ ತಿಳಿಸಿದರು. ಈ ಎಲ್ಲಾ ವಿಚಾರಗಳನ್ನು ಪೋಲೀಸರ ಮುಂದೆ ಹೇಳಿರುತ್ತೇನೆ.

**ಪಾಟೀಸವಾಲುಃ ಆರೋಪಿತರ ಪರ ಶ್ರೀಮತಿ ಹೆಚ್.ಎಸ್.ಆರ್ ವಕೀಲರಿಂದಃ**
**ಆರೋಪಿತರ ಪರ ವಕೀಲರು ಗೈರು ಹಾಜರಿದ್ದು ಆರೋಪಿತರು ಪಾಟೀ ಸವಾಲಿಗೆ ಸಮಯ ಕೋರಿದ್ದು ಸಕಾರಣ ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಗಿದೆ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)
ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದೆ

**(ಮಂಜುಳಾ ಇಟ್ಟಿ)**
5ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ,
ಮಂಡ್ಯ